# IN THE COURT OF THE ADDL. SENIOR CIVIL JUDGE & JMFC., GUBBI

**OS - 88/2025**

Witness present and duly sworn on : 15/06/2026

Cross Examination: by Counsel for Defendant No.3 :

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 1974 ರಲ್ಲಿ ಜನಿಸಿದ್ದೇನೆ. ಸರ್ವೆ ನಂ.21 ರ ಸ್ವತ್ತು ನನಗೆ ಗೊತ್ತು. ಸರ್ವೆ ನಂ.21 ಮೊದಲಿಗೆ ಶಟ್ಟಿಳಯ್ಯ , ಅಂಜನಪ್ಪರವರಿಗೆ ಸೇರಿತ್ತು. ಸಾಷ್ಷಿ ಮುಂದುವರೆದು ಭಾಗ ಮಾಡಿಕೊಂಡಿದ್ದೇವೆ. ಶೆಟ್ಟಳಯ್ಯ ಎಂದರೆ ಹನುಮಂತಯ್ಯರವರ ಮಕ್ಕಳು. ಹನುಮಂತಯ್ಯರವರ ತಂದೆಯ ಹೆಸರು ರಂಗಯ್ಯ. ರಂಗಯ್ಯರವರಿಗೆ 5 ಜನ ಮಕ್ಕಳು ಇರಬಹದು. ಅವರುಗಳು ಸಂಜೀವಯ್ಯ, ಯಲ್ಲಯ್ಯ, ಹನುಮಂತಯ್ಯ, ರಂಗಧಾಮಯ್ಯ, ಕೃಷ್ಣಪ್ಪ . ರಂಗಯ್ರ್ಯವರಿಗೆ ಸಾಗುವಳಿ ಮೂಲಕ ಸರ್ಕಾರದವರು ನೀಡಿದ ಆಸ್ತಿ ಎಂದರೆ ಸರಿ. ರಂಗಯ್ಯನ 5 ಜನ ಮಕ್ಕಳು ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಯಾವ ಆಸ್ತಿಗಳು ಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾವ ಸರ್ವೆ ನಂ. ಖಾತೆಗಳು ವಿಭಾಗದಂತೆ ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ಯಾವಾಗ ವಿಭಾಗ ಮಾಡಿಕೊಂಡಿದ್ದಾರೆಂದು ದಿನಾಂಕ ನನಗೆ ಗೊತ್ತಿಲ್ಲ.

ದಾವಾ ಆಸ್ತಿ 4 ಎಕರೆಯಲ್ಲಿ ವಿಭಾಗವಾಗಿಲ್ಲ ಮತ್ತು ಅದು ಒಟ್ಟು ಕುಟುಂಬದ ಆಸ್ತಿ ಎಂದರೆ ಮುಂಚೆ ವಿಭಾಗ ಆಗಿತ್ತು. ಸಾಕ್ಷಿ ಮುಂದುವರೆದು ಅದರಲ್ಲಿ 2 ಎಕರೆ ಜಮೀನನ್ನು ಹನುಮಯ್ಯರವರಿಗೆ ಹನುಮಂತಯ್ಯರವರು ಮಾರಾಟ ಮಾಡಿದ್ದರು. ಸದರಿ ಮಾರಾಟವು ಸುಮಾರು 50 ವರ್ಷಗಳ ಹಿಂದೆ ಆಗಿತ್ತು ದಿನಾಂಕ ನನಗೆ ಗೊತ್ತಿಲ್ಲ. ಹನುಮಂತಯ್ಯ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿಲ್ಲ ಮತ್ತು ಒಟ್ಟು ಕುಟುಂಬದಲ್ಲಿ ಇದ್ದಾರೆಂದರೆ ಸರಿಯಲ್ಲ. 2 ಎಕರೆ ಜಮೀನು ಮಾರಾಟವಾಗಿಲ್ಲ ಆದರೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು 1974 ರಲ್ಲಿ ಜನಿಸಿರುವ ಕಾರಣ ನನಗೆ ಮಾಹಿತಿ ಗೊತ್ತಿಲ್ಲ ಎಂದರೆ ನನ್ನ ತಂದೆ ಮಾರಾಟದ ವಿಷಯ ತಿಳಿಸಿರುತ್ತಾರೆ. ನಾನು ಮಾರಾಟ ಆಗಿರುವ ಪತ್ರವನ್ನು ನೋಡಿಲ್ಲ. ನಾನು ವಾದಿ ದೊಡ್ಡಮಲ್ಲಯ್ಯರವರೊಡನೆ ಚೆನ್ನಾಗಿದ್ದೇನೆಂದರೆ ಅವರ ಪಾಡಿಗೆ ಅವರು ನನ್ನ ಪಾಡಿಗೆ ನಾನು ಇದ್ದೇನೆ. ಪ್ರತಿವಾದಿಗಳಾದ ಅಂಜನಪ್ಪ, ಶೆಟ್ಟಳಯ್ಯ , ಯಲ್ಲಯ್ಯರವರೊಂದಿಗೆ

ನಾನು ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳೊಂದಿಗೆ ವಿಶ್ವಾಸದಿಂದ ಇರದೇ ಇದ್ದ ಕಾರಣ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಯು ಈಗ ಹನುಮಂತಯ್ಯನವರ ಹೆಸರಿನಲ್ಲಿ ಇರುತ್ತದೆ. ವಿಭಾಗ ಆಗಿಲ್ಲ ಮತ್ತು ವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ಯಾವ ವಿಚಾರಗಳೂ ಗೊತ್ತಿಲ್ಲದೇ ಇದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳು 4 ಎಕರೆಯ ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ.

**Cross Examination: by Counsel for Defendant No.1, 2 :**

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಯು ಹನುಮಂತಯ್ಯನವರಿಗೆ ದಿಃ09/06/1954 ರಂದು ಮಂಜೂರಾಗಿತ್ತು ಎಂದರೆ ಸರಿ. ಹನುಮಂತಯ್ಯ ಮತ್ತು ಆತನ ಮಗನಾದ ಶೆಟ್ಟಳಯ್ಯ ಸ್ವಾಧೀನದಲ್ಲಿ ಇದ್ದರು ಎಂದರೆ ಕೇವಲ 2 ಎಕರೆಯ ಸ್ವಾಧೀನದಲ್ಲಿ ಇದ್ದರು. ದಿಃ06/07/1970 ರಂದು ಮಾರಾಟ ಮಾಡಿರುವ ಹನುಮಯ್ಯ ನನ್ನ ತಂದೆ. ಮಾರಾಟ ಆಗುವಾಗ ಯಲ್ಲಯ್ಯರವರ ಹೆಸರಿಗೆ ಕಂದಾಯ ದಾಖಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಯಲ್ಲ್ಕಯ್ಯರವರಿಗೆ ದಾಖಲೆಗಳು ಇದ್ದವು ಎಂದು ತೋರಿಸಲು ನನ್ನ ಹತ್ತಿರ ದಾಖಲೆ ಇರುವುದಿಲ್ಲ. ದಾವಾ ಆಸ್ತಿಯು 1 ಮತ್ತು 2 ರ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿ ಎಂದರೆ ದರ್ಕಾಸ್ತು ಮೂಲಕ ಬಂದಿರುತ್ತದೆ. ವಾದಿಯು ನನ್ನನ್ನು ಕರೆದುಕೊಂಡು ಬಂದಿದ್ದಾರೆಂದರೆ ನಾನಾಗಿಯೇ ಬಂದಿದ್ದೇನೆ. 1 ಮತ್ತು 2 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ. ಅವರಿಗೆ ತೊಂದರೆ ಕೊಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಮತ್ತು 3 ನೇ ಪ್ರತಿವಾದಿ ಕ್ರಯಪತ್ರವನ್ನು ಸೃಷ್ಟಿಸಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯು ಸ್ವಾಧೀನ ಅನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Sd/-

Addl. Senior Civil Judge and
JMFC., Gubbi